# ಆಂಧ್ರದಿಂದ ಕಳಪೆ ಗುಣಮಟ್ಟದ ಹಾಲು, ನಮ್ಮ ಪ್ರತಿಭಟನೆ

## ಹೆರಿಟೇಜ್ ಹಾಲಿನ ಪೊಟ್ಟಣ ಚೆಲ್ಲಿ ಪ್ರತಿಭಟನೆ

ಕೋಲಾರ, ಅ. 21- ಕಳಪೆ ಗುಣಮಟ್ಟದ ಹಾಲನ್ನು ರಾಜ್ಯದೊಳಕ್ಕೆ ಸಾಗಾಣೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಹಾಲು ಸಾಗಾಣೆ ಲಾರಿಯನ್ನು ತಡೆದು ಹಾಲಿನ ಪೊಟ್ಟಣಗಳನ್ನು ಹೊಡೆದು ಹಾಕುವ ಮೂಲಕ ಇಂದು ಪ್ರತಿಭಟನೆ ವ್ಯಕ್ತಪಡಿಸಿದರು.

ಆಂಧ್ರಪ್ರದೇಶದ ಕುಪ್ಪಂನಿಂದ ಬೆಂಗಳೂರು ಕಡೆಗೆ ಹೊರಟಿದ್ದ ಹೆರಿಟೇಜ್ ಹಾಲು ಸಾಗಾಣೆ ಲಾರಿಯನ್ನು ವೇದಿಕೆ ಕಾರ್ಯಕರ್ತರು ನಗರದ ಹೊರ ವಲಯದ ರಾಷ್ಟ್ರೀಯ ಹೆದ್ದಾರಿ ಸಮೀಪದ ದೇವಮಂಗಲ ರಸ್ತೆಯಲ್ಲಿ ತಡೆದರು. ಕ್ಯಾಂಟರ್‌ನಲ್ಲಿ ತುಂಬಿದ್ದ ಹಾಲಿನ ಪೊಟ್ಟಣಗಳನ್ನು ರಸ್ತೆಗೆ ಚೆಲ್ಲಿ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು.

ಹೊರ ರಾಜ್ಯದಿಂದ ಕಳಪೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಜನರ ಆರೋಗ್ಯವನ್ನು ಹಾಳುಮಾಡಲಾಗುತ್ತಿದೆ. ರಾಜ್ಯದಲ್ಲಿ ರೈತರು ಉತ್ಪಾದಿಸುವ ಹಾಲಿಗೆ ಮಾರಕವಾಗಿ ಪರಿಣಮಿಸಿದೆ. ರೈತರಿಗೆ ಇದರಿಂದ ತೀವ್ರ ತೊಂದರೆಯಾಗುತ್ತದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕಳಪೆ ಗುಣಮಟ್ಟದ ಹಾಲನ್ನು ಕೊಡುವುದರ ಜತೆಗೆ ರಾಜ್ಯದಲ್ಲಿರುವ ಸಹಕಾರಿ ವ್ಯವಸ್ಥೆಗೆ ಧಕ್ಕೆ ತರುವ ಕೆಲಸವನ್ನು ಮಾಡಲಾಗುತ್ತಿದೆ. ಕಳಪೆ ಹಾಲನ್ನು ನೀಡುವ ಮೂಲಕ ಜನರನ್ನು ಮೋಸಮಾಡಿ. ರಾಜ್ಯದ ರೈತರು ಉತ್ಪಾದಿಸುವ ಹಾಲಿಗೆ ಮಾರುಕಟ್ಟೆ ಇಲ್ಲದಂತೆ ಮಾಡಲಾಗುತ್ತಿದೆ. ಜನರು ಹಾಗೂ ರೈತರ ಮೇಲೆ ತೀವ್ರ ಕೆಟ್ಟ ಪರಿಣಾಮವನ್ನು ಬೀರುತ್ತದೆ ಎಂದು ಆರೋಪಿಸಿದರು.

ಇಂತಹ ಕಳಪೆ ಗುಣಮಟ್ಟದ ಹಾಲನ್ನು ಸರ್ಕಾರ ತಕ್ಷಣ ರಾಜ್ಯದಲ್ಲಿ ನಿಷೇಧಿಸಬೇಕು. ಹೊರ ರಾಜ್ಯಗಳಿಂದ ಬರುವ ಎಲ್ಲಾ ಹಾಲಿನ ಮೇಲೆ ನಿರ್ಬಂಧ ಹಾಕಬೇಕು. ರಾಜ್ಯದಲ್ಲಿ ರೈತರು ಶ್ರಮದಿಂದ ಉತ್ಪಾದಿಸುವ ಹಾಲಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸಬೇಕು. ಇಲ್ಲಿನ ರೈತರನ್ನು ರಕ್ಷಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ಮುಖಂಡ ಜಯದೇವ ಪ್ರಸನ್ನ, ಜಿಲ್ಲಾ ಘಟಕದ ಅಧ್ಯಕ್ಷ ಕೋದಂಡರಾಮ್ ಮೊದಲಾದವರು ಪ್ರತಿಭಟನೆ ನೇತೃತ್ವ ವಹಿಸಿದ್ದರು. ನಂತರ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು.

ಆಂಧ್ರದಿಂದ ಕಳಪೆ ಗುಣಮಟ್ಟದ ಹಾಲು, ನಮ್ಮ ಪ್ರತಿಭಟನೆ



ಆಂಧ್ರಪ್ರದೇಶದಿಂದ ರಾಜ್ಯಕ್ಕೆ ಸಾಗಣೆ ಮಾಡುತ್ತಿದ್ದ ಹಾಲಿನ ಲಾರಿಯನ್ನು ಶನಿವಾರ ಕೋಲಾರ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಸಮೀಪ ಬೇತಮಂಗಲ ರಸ್ತೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ತಡೆದು ಹಾಲಿನ ಪೊಟ್ಟಣಗಳನ್ನು ಒಡೆದು ಹಾಕಿದರು.